ಓ.ಎಸ್.ನಂ.5/2014
ಪಿ ಡಬ್ಲು. 1

ದಿನಾಂಕಃ 08.01.2018 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಭೋದಿಸಲಾಯಿತು.

ಮುಂದುವರೆದ ಪಾಟಿಸವಾಲು: ಶ್ರೀ.ಎ.ಪಿ.ಕೆ. ವಕೀಲರಿಂದ ಪ್ರತಿವಾದಿ ಪರವಾಗಿ.

14. ನನ್ನ ತಂದೆಗೆ ಎಷ್ಟು ಮಕ್ಕಳು ಅಂತ ವಂಶಾವಳಿ ಕೊಟ್ಟಿಲ್ಲ. ನನ್ನ ತಂದೆಗೆ ಮೊದಲನೇದವರು ನೀಲಪ್ಪ, ಮೃತಪಟ್ಟಿದ್ದು, ಮಕ್ಕಳು ಇರುತ್ತಾರೆ. 2. ಪುಂಡಲೀಕ ಮೃತ ಪಟ್ಟಿದ್ದು, 3 ನೇ ಪ್ರತಿವಾದಿ ಆತನ ಮಗ. ಪುಂಡಲಿಕನಿಗೆ 7 ಜನ ಮಕ್ಕಳು. ಸೀತಾರಾಮನನ್ನು ಹೊರತುಪಡಿಸಿ ಬೇರೆಯವರನ್ನು ಪಾರ್ಟಿ ಮಾಡಿಲ್ಲ. 3. ಲಕ್ಷ್ಮಣ ಮೃತಪಟ್ಟಿದ್ದು, ಮಕ್ಕಳು ಇರುವುದಿಲ್ಲ. 4. ಗೋದವ್ವ, ಮೃತರಾಗಿದ್ದು, ಮಕ್ಕಳು ಇರುವುದಿಲ್ಲ. 5. ಚೆನ್ನವ್ವ, ಮೃತಪಟ್ಟಿದ್ದು, ಅವರಿಗೆ 10 ಜನ ಮಕ್ಕಳು ಇರಬಹುದು. 6. ಸೋನವ್ವ, ಮೃತಪಟ್ಟಿದ್ದು, ಆಕೆಗೆ 5 ಜನ ಮಕ್ಕಳು ಇರುತ್ತಾರೆ. 7. ಸುಶೀಲಾಬಾಯಿ, ಆಕೆಗೆ ಲಗ್ನ ಆಗಿರಲಿಲ್ಲ. 8. ಸುಮಿತ್ರಾ, 9. ಶ್ರೀಮಂತೆವ್ವ, ಮೃತಪಟ್ಟಿದ್ದು, ಮಕ್ಕಳು ಇರುತ್ತಾರೆ. 10.ಜಯವಂತ 1 ನೇ ಪ್ರತಿವಾದಿ, 11. ಗೋಪಾಲ, ಮೃತಪಟ್ಟಿದ್ದು, 2 ನೇ ಪ್ರತಿವಾದಿ ಆತನ ಒಬ್ಬಳೆ ಮಗಳು. 12. ಸುರೇಶ ಅಂದರೆ ನಾನು. ಎರಡನೇದವನು ಶಿವಪ್ಪ ಎಂದರೆ ಸರಿ. ಮೃತಪಟ್ಟಿದ್ದಾನೆ, ಮಕ್ಕಳು ಇರುವುದಿಲ್ಲ. ಈ ಎಲ್ಲಾ ವಂಶಾವಳಿದಾರರನ್ನು ಪಾರ್ಟಿ ಮಾಡಿಲ್ಲ ಎಂದರೆ ಸರಿ.

15. ನಿಪಿ-4 ರಲ್ಲಿ ಸುಶೀಲಾಬಾಯಿಯ ಜೊತೆಗೆ ಇತರರ ಹೆಸರು ಜಂಟಿಯಾಗಿ ಇದೆ ಎಂದರೆ ಸರಿ. ತಪ್ಪಾಗಿ ಆಗಿದೆ. ಸುಶೀಲಾಬಾಯಿಗೆ ಪ್ರತ್ಯೇಕ ಜಮೀನು ಇದೆ ಎಂದು ತೋರಿಸಲು ದಾಖಲೆ ಇದೆ. ಅದನ್ನು ಹಾಜರುಪಡಿಸುತ್ತೇನೆ. ಜಂಟಿಯಾಗಿ ಉತಾರು ಇರುವ ಕಾರಣ ಎಲ್ಲರೂ ಅವಶ್ಯಕ ಪಕ್ಷಗಾರರು ಎಂದರೆ ಸರಿಯಲ್ಲ. ಸುಶೀಲಾಬಾಯಿ ನನ್ನ ಜೊತೆಗೆ ಇರುತ್ತಿದ್ದರು. ನನ್ನ ತಂದೆ ಸುಶೀಲಾಬಾಯಿ ಹೆಸರಿಗೆ ಆಸ್ತಿ ಮಾಡಿದ್ದಾರೆ.

ಮುಂದಿನ ಪಾಟಿಸವಾಲಿಗೆ ಸಮಯಾವಕಾಶವನ್ನು ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.
ಓ.ಹೇ.ಕೇ.ಸರಿ ಇದೆ ಅಂತಾ ಒಪ್ಪಿರುವರು.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ಜಮಖಂಡಿ